## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಚಿಂತಾಮಣಿ

## ಸಿಸಿ ನಂ.16/2019

**PW-2**
**CW-1**

**ದಿನಾಂಕಃ03-12-2022 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಅನಿಲ್ ಕುಮಾರ್ |
| ತಂದೆಯ ಹೆಸರು | ಃ | ನರಸಯ್ಯ |
| ವಯಸ್ಸು | ಃ | 37 |
| ಉದ್ಯೋಗ | ಃ | ಪಿಎಸ್ ಐ, ಬೆಸ್ಕಾಂ, ವಿಜಿಲಿಯನ್ಸ್, ಬೆಂಗಳೂರು |
| ವಾಸಸ್ಥಳ | ಃ | ಬೆಂಗಳೂರು |

**ಮುಖ್ಯ ವಿಚಾರಣೆಃ ಮಾನ್ಯ ಎಎಪಿ ರವರಿಂದಃ-**

ನಾನು ಪೆಬ್ರವರಿ 2016 ರಿಂದ ನವೆಂಬರ್ 2017 ರವರೆಗೂ ಕೆಂಚಾರ್ಲಹಳ್ಳಿ ಪೋಲೀಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 02.08.2017 ರಂದು ನಾನು ಮತ್ತು ಠಾಣಾ ಸಿಬ್ಬಂದಿಯಾದ ಚಾಸಾ 2 ರಿಂದ 4 ರವರು ರಾತ್ರಿ ಗಸ್ತಿನಲ್ಲಿದ್ದಾಗ ದಿನಾಂಕ 03.08.2017 ರಂದು ಬೆಳಗಿನ ಜಾವ 4 ಗಂಟೆಗೆ ಮರಿನಾಯನಹಳ್ಳಿ ಕ್ರಾಸ್ ಬಳಿ ಹೋಗಿ ಜೀಪ್ ನ್ನು ನಿಲ್ಲಿಸಿ, ದೇವಸ್ಥಾನ ಮತ್ತು ಅಂಗಡಿಗಳ ಕಡೆ ಗಸ್ತು ಮಾಡುತ್ತಿದ್ದಾಗ ಯಾರೋ ಒಬ್ಬ ಆಸಾಮಿ ಚಿಂತಾಮಣಿ ಕಡೆಯಿಂದ ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದವನು, ಸಮವಸ್ತ್ರದಲ್ಲಿದ್ದ ನಮ್ಮನ್ನು ಮತ್ತು ಜೀಪ್ ನ್ನು ಕಂಡು, ದ್ವಿಚಕ್ರ ವಾಹನವನ್ನು ಹಿಂದಕ್ಕೆ ತಿರುಗಿಸಿಕೊಂಡು ಹೋಗುತ್ತಿದ್ದವನನ್ನು ಜೀಪಿನಲ್ಲಿ ಹಿಂಬಾಲಿಸಿಕೊಂಡು ಹೋಗಿ ಹಿಡಿದು, ಹೆಸರು ಮತ್ತು ವಿಳಾಸವನ್ನು ವಿಚಾರಿಸಲಾಗಿ, ವೆಂಕಟಸ್ವಾಮಿ ಬಿನ್ ಮುನಿನಾರಾಯಣಪ್ಪ, ದಂಡುಪಾಳ್ಯ ಎಂದು ತಿಳಿಸಿದ್ದು, ದ್ವಿಚಕ್ರ ವಾಹನದ ದಾಖಲಾತಿಗಳನ್ನು ಕೇಳಲಾಗಿ ಯಾವುದೇ ಉತ್ತರವನ್ನು ನೀಡದೇ ತೊದಲು ಮಾತುಗಳಿಂದ ನನ್ನ ಬಳಿ ಯಾವುದೇ ದಾಖಲೆಗಳು ಇಲ್ಲ ಎಂದು ತಿಳಿಸಿದ್ದನು.

ಆತನ ಮೇಲೆ ಅನುಮಾನ ಬಂದು ಆತನನ್ನು ಠಾಣೆಗೆ ಕರೆದುಕೊಂಡು ಹೋಗಿ ಕುಲಂಕುಷವಾಗಿ ವಿಚಾರಣೆ ಮಾಡಲಾಗಿ, ದ್ವಿಚಕ್ರ ವಾಹನ ಕಳೆದ 5 ದಿನಗಳ ಹಿಂದೆ ಬೆಂಗಳೂರಿನ ನಾಗವಾರದ ಸಮೀಪ ಯಾವುದೇ ಮನೆಯಲ್ಲಿ ಕಳ್ಳತನ ಮಾಡಿಕೊಂಡು ಬಂದಿರುವ ವಿಚಾರ ತಿಳಿದು ಬಂತು, ಇದಲ್ಲದೇ ಇನ್ನು ಅನೇಕ ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡಿರುವುದಾಗಿ ಆರೋಪಿಯಿಂದ ತಿಳಿದು ಬಂತು. ಆರೋಪಿಯ ಬಳಿ ಇದ್ದ ದ್ವಿಚಕ್ರ ವಾಹನವನ್ನು ಪರಿಶೀಲಿಸಿದಾಗ ಕಪ್ಪು ಬಣ್ಣದ ಹಿರೋಹೊಂಡಾ ಸ್ಲೆಂಡರ್ ವಾಹನ ಸಂಖ್ಯೆ ಕೆಎ 03 ಇಜಿ 6243 ಆಗಿತ್ತು. ಸದರಿ ಆಸಾಮಿಯನ್ನು ಮತ್ತು ವಾಹನವನ್ನು ವಶಕ್ಕೆ ಪಡೆದು ಬೆಳಗಿನ ಜಾವ 5 ಗಂಟೆ ಸ್ವ ಪ್ರಕರಣವನ್ನು ಠಾಣಾ ಮೊಕದ್ದಮೆ ಸಂಖ್ಯೆ 157/2017 ರ ಅನ್ವಯ ದಾಖಲಿಸಿರುತ್ತೇನೆ.

ಅದೇ ದಿನ ಪ್ರ.ವ.ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಮತ್ತು ನನ್ನ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಬೆಳಗ್ಗೆ 6 ರಿಂದ 7 ಗಂಟೆಯ ಸುಮಾರಿಗೆ ಠಾಣಾ ಆವರಣದಲ್ಲಿ ನಿಪಿ 1 ರಂತೆ ಪಂಚರಾದ ಚಾಸಾ 5 ಮತ್ತು 6 ರವರ ಸಮಕ್ಷಮ ಮಹಜರ್ ಜರುಗಿಸಿ ದ್ವಿಚಕ್ರ ವಾಹನವನ್ನು ವಶಕ್ಕೆ ಪಡೆದು ಠಾಣಾ ಮಾಲುಪಟ್ಟಿ ಸಂಖ್ಯೆ 85/2017 ರಂತೆ ನಮೂದಿಸಿಕೊಂಡಿರುತ್ತೇನೆ. ನಿಪಿ 1 ಮಹಜರ್ ಗೆ ಆರೋಪಿ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ. ನಿಪಿ 1 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 1(ಬಿ), ಆರೋಪಿಯ ಹೆಬ್ಬೆಟ್ಟಿನ ಗುರುತನ್ನು ನಿಪಿ 1(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ತಾನು ದಾಖಲಿಸಿದ ಸ್ವ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 6 ಎಂದು, ಸಾಕ್ಷಿಯ ಸಹಿಯನ್ನು ನಿಪಿ 6(ಎ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ನಿಪಿ 7 ಎಂದು, ಸಾಕ್ಷಿಯ ಸಹಿಯನ್ನು ನಿಪಿ 7(ಎ) ಎಂದು ಗುರುತಿಸಲಾಯಿತು.

ನಂತರ ಅದೇ ದಿನ ಆರೋಪಿಯ ಸ್ವ ಇಚ್ಚಾ ಹೇಳಿಕೆಯನ್ನು ಪಡೆದಿರುತ್ತೇನೆ. ಆರೋಪಿಯ ಹೇಳಿಕೆಯಲ್ಲಿ ಆರೋಪಿ ನನ್ನನ್ನು ಕರೆದುಕೊಂಡು ಹೋದರೆ ನಾನು ಕಳ್ಳತನ ಮಾಡಿಕೊಂಡು ತಂದು ಇಟ್ಟಿರುವ ದ್ವಿಚಕ್ರ ವಾಹನಗಳನ್ನು ತೋರಿಸಿ ಎತ್ತಿಕೊಡುತ್ತೇನೆಂದು ತಿಳಿಸಿದ್ದರ ಮೇರೆಗೆ ಅದೇದಿನ ಆರೋಪಿಯ ಗ್ರಾಮವಾಗಿ ದಂಡುಪಾಳ್ಯ ಗ್ರಾಮಕ್ಕೆ ಹೋಗಿ ಆರೋಪಿಯ ಮನೆಯ ಹತ್ತಿರ ಆರೋಪಿ ತೋರಿಸಿದ ನಾಲ್ಕು ದ್ವಿಚಕ್ರ ವಾಹನದ ಅಮಾನತ್ತು ಪಂಚನಾಮೆಯನ್ನು ಬೆಳಗ್ಗೆ 9.30 ರಿಂದ 10.30 ರವರೆಗೆ ಪಂಚರಾದ ಚಾಸಾ 5 ಮತ್ತು ಆರೋಪಿಯ ಸಮಕ್ಷಮ ಜರುಗಿಸಿ, ನಾಲ್ಕು ದ್ವಿಚಕ್ರ

ವಾಹನಗಳನ್ನು ವಶಪಡಿಸಿಕೊಂಡಿರುತ್ತೇನೆ. ದ್ವಿಚಕ್ರ ವಾಹನಗಳಲ್ಲಿ ನೊಂದಣಿ ಸಂಖ್ಯೆ ನಮೂದು ಇಲ್ಲದ ಕಾರಣ ಸದರಿ ವಾಹನಗಳ ಚಾಸಿಸ್ ನಂಬರ್ ಮತ್ತು ಇಂಜಿನ್ ನಂಬರ್ ಗಳನ್ನು ಅಮಾನತ್ತು ಪಂಚನಾಮೆಯಲ್ಲಿ ನಮೂದಿಸಿರುತ್ತೇನೆ. ವಶಪಡಿಸಿಕೊಂಡು ನಾಲ್ಕು ದ್ವಿಚಕ್ರ ವಾಹನಗಳನ್ನು ಠಾಣಾ ಪಾಲು ಪಟ್ಟಿ ಸಂಖ್ಯೆ 86/2017 ರ ರೀತ್ಯ ನಮೂದಿಸಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ಮಹಜರ್ ನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 8 ಎಂದು, ಸಾಕ್ಷಿಯ ಸಹಿಯನ್ನು ನಿಪಿ 8(ಎ) ಎಂದು ಗುರುತಿಸಲಾಯಿತು. ನಿಪಿ 8 ರಲ್ಲಿರುವ ಆರೋಪಿಯ ಹೆಬ್ಬೆಟ್ಟಿನ ಗುರುತನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 8(ಬಿ) ಎಂದು ಗುರುತಿಸಲಾಯಿತು.

ಅದೇ ದಿನ ಕೋಲಾರ ಜಿಲ್ಲೆಯ ಚಿಕ್ಕಾರ್ಲ ಹಳ್ಳಿಗೆ ಆರೋಪಿಯ ಜೊತೆ, ಆರೋಪಿ ತೋರಿಸಿದ ಚಾಸಾ 6 ರವರ ಮನೆಯ ಬಳಿ ತೆರಳಿ, ಚಾಸಾ 6 ರವರು ಹಾಜರುಪಡಿಸಿದ ಐದು ದ್ವಿಚಕ್ರ ವಾಹನಗಳನ್ನು ಚಾಸಾ 5,6 ಮತ್ತು ಆರೋಪಿ ರವರ ಸಮಕ್ಷಮ ಬೆಳಗ್ಗೆ 11 ರಿಂದ 12 ರವರೆಗೆ ಅಮಾನತ್ತು ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸದರಿ ದ್ವಿಚಕ್ರ ವಾಹನಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 87/2017 ರಲ್ಲಿ ನಮೂದಿಸಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ವಶಪಡಿಸಿಕೊಂಡ ಐದು ವಾಹನಗಳ ಪೈಕಿ ಒಂದು ದ್ವಿಚಕ್ರ ವಾಹನಕ್ಕೆ ನೊಂದಣಿ ಸಂಖ್ಯೆ ಇದ್ದು ಉಳಿದ ವಾಹನಗಳಿಗೆ ನೊಂದಣಿ ಸಂಖ್ಯೆ ನಮೂದು ಇಲ್ಲದ ಕಾರಣ ಎಲ್ಲಾ ವಾಹನಗಳ ಚಾಸಿಸ್ ನಂಬರ್ ಮತ್ತು ಇಂಜಿನ್ ನಂಬರ್ ಗಳನ್ನು ಅಮಾನತ್ತು ಪಂಚನಾಮೆಯಲ್ಲಿ ನಮೂದಿಸಿರುತ್ತೇನೆ. ಸಾಕ್ಷಿ ಮಹಜರ್ ನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 2 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ 2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಆರೋಪಿಯ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 2(ಸಿ) ಎಂದು ಗುರುತಿಸಲಾಯಿತು.

ನಂತರ ಅದೇ ದಿನ ಚಿಕ್ಕಬಳ್ಳಾಪುರ ತಾಲ್ಲೂಕು ದೊಡ್ಡಕಿರುಗುಂಬಿ ಗ್ರಾಮಕ್ಕೆ ಆರೋಪಿಯೊಂದಿಗೆ ಹೋಗಿ ಆರೋಪಿ ತೋರಿಸಿದ ಆತನ ಅತ್ತೆಯಾದ ಚೆನ್ನಮ್ಮಯ್ಯರವರ ವಾಸದ ಮನೆಯ ಮುಂದೆ ಇದ್ದ ಐದು ದ್ವಿಚಕ್ರ ವಾಹನಗಳನ್ನು ಅಮಾನತ್ತು ಪಂಚನಾಮೆಯ ಮೂಲಕ

ಪಂಚರಾದ ಚಾಸಾ 5 ರವರ ಸಮಕ್ಷಮ ಮದ್ಯಾಹ್ನ 1 ರಿಂದ 2 ಗಂಟೆಯವರೆಗೆ ಜರುಗಿಸಿರುತ್ತೇನೆ. ಸದರಿ ದ್ವಿಚಕ್ರ ವಾಹನಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 88/2017 ರಲ್ಲಿ ನಮೂದಿಸಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ವಶಪಡಿಸಿಕೊಂಡ ಐದು ವಾಹನಗಳ ನೊಂದಣಿ ಸಂಖ್ಯೆ ಇದ್ದು ಸದರಿ ವಾಹನಗಳ ನೊಂದಣಿ ಸಂಖ್ಯೆ ಮತ್ತು ಚಾಸಿಸ್ ನಂಬರ್ ಮತ್ತು ಇಂಜಿನ್ ನಂಬರ್ ಗಳನ್ನು ಅಮಾನತ್ತು ಪಂಚನಾಮೆಯಲ್ಲಿ ನಮೂದಿಸಿರುತ್ತೇನೆ. ಸಾಕ್ಷಿ ಮಹಜರ್ ನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 9 ಎಂದು, ಸಾಕ್ಷಿಯ ಸಹಿಯನ್ನು ನಿಪಿ 9(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಆರೋಪಿಯ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 9(ಬಿ) ಎಂದು ಗುರುತಿಸಲಾಯಿತು.

ನಂತರ ಅದೇ ದಿನ ಚಿಕ್ಕಬಳ್ಳಾಪುರ ತಾಲ್ಲೂಕು ಚಿಕ್ಕಕಿರುಗುಂಬಿ ಗ್ರಾಮಕ್ಕೆ ಆರೋಪಿಯೊಂದಿಗೆ ಹೋಗಿ ಆರೋಪಿ ತೋರಿಸಿದ ಚಾಸಾ 5 ರವರ ವಾಸದ ಮನೆಯ ಮುಂದಿನ ಕಾಂಪೌಂಡ್ ಬಳಿ ನಿಲ್ಲಿಸಿದ ನಾಲ್ಕು ದ್ವಿಚಕ್ರ ವಾಹನಗಳನ್ನು ಅಮಾನತ್ತು ಪಂಚನಾಮೆಯ ಮೂಲಕ ಪಂಚರಾದ ಚಾಸಾ 5 ಮತ್ತು 6 ರವರ ಸಮಕ್ಷಮ ಮದ್ಯಾಹ್ನ 2.30 ರಿಂದ 3.30 ಗಂಟೆಯವರೆಗೆ ಜರುಗಿಸಿರುತ್ತೇನೆ. ಸದರಿ ದ್ವಿಚಕ್ರ ವಾಹನಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 89/2017 ರಲ್ಲಿ ನಮೂದಿಸಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ವಶಪಡಿಸಿಕೊಂಡ ಮೂರು ವಾಹನಗಳ ನೊಂದಣಿ ಸಂಖ್ಯೆ ಇದ್ದು ಉಳಿದ ಒಂದು ವಾಹಕ್ಕೆ ನೊಂದಣಿ ಸಂಖ್ಯೆ ಇರಲಿಲ್ಲ. ಸದರಿ ಎಲ್ಲಾ ವಾಹನಗಳ ನೊಂದಣಿ ಸಂಖ್ಯೆ ಮತ್ತು ಚಾಸಿಸ್ ನಂಬರ್ ಮತ್ತು ಇಂಜಿನ್ ನಂಬರ್ ಗಳನ್ನು ಅಮಾನತ್ತು ಪಂಚನಾಮೆಯಲ್ಲಿ ನಮೂದಿಸಿರುತ್ತೇನೆ. ಸಾಕ್ಷಿ ಅಮಾನತ್ತು ಮಹಜರ್ ನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 3(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಆರೋಪಿಯ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 3(ಸಿ) ಎಂದು ಗುರುತಿಸಲಾಯಿತು.

ಅದೇ ದಿನ ಆರೋಪಿ ಮುಂದಿನ ತನಿಖೆಗೆ ಅವಶ್ಯಕ ಇದ್ದುದ್ದರಿಂದ ನ್ಯಾಯಾಲಯಕ್ಕೆ ಆರೋಪಿಯನ್ನು ಪೋಲೀಸ್ ಅಭಿರಕ್ಷೆಗೆ ನೀಡುವಂತೆ ಕೋರಿ ಆರೋಪಿಯೊಂದಿಗೆ ನ್ಯಾಯಾಲಯಕ್ಕೆ

ಹಾಜರುಪಡಿಸಿರುತ್ತೇನೆ. ನಂತರ ನ್ಯಾಯಾಲಯದ ಆದೇಶದಂತೆ ದಿನಾಂಕ 03.08.2017 ರಿಂದ 05.08.2017 ರವರೆಗೆ ನನ್ನ ವಶಕ್ಕೆ ಪಡೆದಿರುತ್ತೇನೆ. ಅದೇ ದಿನ ಚಾಸಾ 5 ಮತ್ತು 6 ರವರ ಹೇಳಿಕೆಗಳನ್ನು ಹಾಗೂ ಸಿಬ್ಬಂದಿಗಳಾದ ಚಾಸಾ 2 ಮತ್ತು 3 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

ನಂತರ ದಿನಾಂಕ 04.08.2017 ರಂದು ಆರೋಪಿ ಈ ಹಿಂದೆ ನೀಡಿದ ಸ್ವ ಇಚ್ಛಾ ಹೇಳಿಕೆಯ ಮೇರೆಗೆ ಚಿಕ್ಕಬಳ್ಳಾಪುರ ತಾಲ್ಲೂಕು ಚಿಕ್ಕಕಿರುಗುಂಬಿ ಗ್ರಾಮಕ್ಕೆ ತೆರಳಿ ಆರೋಪಿ ತೋರಿಸಿದ ಚಾಸಾ 7 ರವರ ಮನೆಯ ಕಾಂಪೌಂಡ್ ಬಳಿ ಇದ್ದ ಎರಡು ದ್ವಿಚಕ್ರ ವಾಹನಗಳನ್ನು ಅಮಾನತ್ತು ಪಂಚನಾಮೆಯ ಮೂಲಕ ಪಂಚರಾದ ಚಾಸಾ 5 ಮತ್ತು 6 ರವರ ಸಮಕ್ಷಮ ಮದ್ಯಾಹ್ನ 12.30 ರಿಂದ 1.30 ಗಂಟೆಯವರೆಗೆ ಜರುಗಿಸಿರುತ್ತೇನೆ. ಸದರಿ ದ್ವಿಚಕ್ರ ವಾಹನಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 90/2017 ರಲ್ಲಿ ನಮೂದಿಸಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ವಶಪಡಿಸಿಕೊಂಡ ಎರಡು ವಾಹನಗಳ ನೊಂದಣಿ ಸಂಖ್ಯೆ ಇದ್ದು ಸದರಿ ವಾಹನಗಳ ನೊಂದಣಿ ಸಂಖ್ಯೆ ಮತ್ತು ಚಾಸಿಸ್ ನಂಬರ್ ಮತ್ತು ಇಂಜಿನ್ ನಂಬರ್ ಗಳನ್ನು ಅಮಾನತ್ತು ಪಂಚನಾಮೆಯಲ್ಲಿ ನಮೂದಿಸಿರುತ್ತೇನೆ. ಸಾಕ್ಷಿ ಮಹಜರ್ ನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 4(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಆರೋಪಿಯ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 4(ಸಿ) ಎಂದು ಗುರುತಿಸಲಾಯಿತು.

ನಂತರ ದಿನಾಂಕ 05.08.2017 ರಂದು ಚಾಸಾ 3 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ಆರೋಪಿಯ ಮರು ಸ್ವ ಇಚ್ಛಾ ಹೇಳಿಕೆಯನ್ನು ಪಡೆದಿರುತ್ತೇನೆ. ಆರೋಪಿ ನೀಡಿದ ಮರು ಸ್ವ ಇಚ್ಛಾ ಹೇಳಿಕೆಯಲ್ಲಿ ಕಟ್ಟಡ ನಿರ್ಮಾಣ ಹಂತದಲ್ಲಿ ಇದ್ದಿದ್ದರಿಂದ ಕಳ್ಳತನ ಮಾಡಿದ ಜಾಗವನ್ನು ತೋರಿಸಲು ಜ್ಞಾಪಕ ಇಲ್ಲ ಎಂದು ಹೇಳಿರುತ್ತಾರೆ. ಸಾಕ್ಷಿ ಆರೋಪಿ ನೀಡಿದ ಮರು ಸ್ವಇಚ್ಛಾ ಹೇಳಿಕಯನ್ನು ನೋಡಿ ಗುರುತಿದ್ದು ಅದನ್ನು ನಿಪಿ 10 ಎಂದು, ಸಾಕ್ಷಿ ಸಹಿಯನ್ನು ನಿಪಿ 10(ಎ) ಎಂದು, ಆರೋಪಿಯ ಹೆಬ್ಬೆಟ್ಟಿನ ಗುರುತನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅನ್ನು ನಿಪಿ 10(ಬಿ) ಎಂದು ಗುರುತಿಸಲಾಯಿತು. ಆರೋಪಿ ಮೊದಲು ನೀಡಿದ ಸ್ವಇಚ್ಛಾ ಹೇಳಿಕೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 11

ಎಂದು,  ಸಾಕ್ಷಿ ಸಹಿಯನ್ನು ನಿಪಿ 11(ಎ) ಎಂದು, ಆರೋಪಿಯ ಹೆಬ್ಬೆಟ್ಟಿನ ಗುರುತನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅನ್ನು ನಿಪಿ 11(ಬಿ) ಎಂದು ಗುರುತಿಸಲಾಯಿತು.

ನಂತರ ಅದೇ ದಿನ ಆರೋಪಿಯನ್ನು ನ್ಯಾಯಾಲಯ ಮುಂದೆ ಹಾಜರುಪಡಿಸಿರುತ್ತೇನೆ. ಅಮಾನತ್ತು ಪಡಿಸಿಕೊಂಡಿರುವ ದ್ವಿಚಕ್ರ ವಾಹನಗಳ ಮಾಲಿಕರ ಪತ್ತೆಗಾಗಿ ದಿನಾಂಕ 09.08.2017 ರಂದು ನಮ್ಮ ಠಾಣಾ ಸಿಬ್ಬಂದಿಯಾದ ಪಿ.ಸಿ.499 ರಾಮಕೃಷ್ಣ ರವರನ್ನು ನೇಮಿಸಿರುತ್ತೇನೆ. ಸದರಿಯವರು ಬೆಂಗಳೂರು ನಗರದ ಕೆ.ಆರ್.ಪುರಂ, ಸಂಪಿಗೆ ಹಳ್ಳಿ, ಆವಲಹಳ್ಳಿ, ಯಲಹಂಕ ಪೋಲೀಸ್ ಠಾಣೆಗಳಲ್ಲಿ ಅಮಾನತ್ತು ಪಡಿಸಿಕೊಂಡ ಕೆಲವು ವಾಹನಗಳಿಗೆ ಸಂಬಂಧಪಟ್ಟಂತೆ ಪ್ರಕರಣ ದಾಖಲಾದ ಬಗ್ಗೆ ಮಾಹಿತಿಯನ್ನು ತಿಳಿಸಿರುತ್ತಾರೆ. ದಿನಾಂಕ 21.08.2017 ರಂದು ನ್ಯಾಯಾಲಯದ ಆದೇಶದಂತೆ ಕೆಎ 53 ಇಇ 1418  ಮತ್ತು ಕೆಎ 41 ಇ 7159 ಮತ್ತು ಕೆಎ 51 ಜೆ 8021 ದ್ವಿಚಕ್ರ ವಾಹನಗಳನ್ನು ವಾಹನದ ಮಾಲಿಕರ ವಶಕ್ಕೆ ನೀಡಿರುತ್ತೇನೆ. ವಾಹನದ ಮಾಲಿಕರಾದ ಚಾಸಾ 14, 16 ಮತ್ತು 9 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ದಿನಾಂಕ 22.08.2017 ರಂದು ಮಾನ್ಯ ನ್ಯಾಯಾಲಯದ ಆದೇಶದಂತೆ ಕೆಎ 03 ಇಜೆ 6243 ದ್ವಿಚಕ್ರ ವಾಹನವನ್ನು ಚಾಸಾ 15 ರವರ ವಶಕ್ಕೆ ನೀಡಿ ಅವರ ಹೇಳಿಕೆಯನ್ನು ಪಡೆದಿರುತ್ತೇನೆ.

ದಿನಾಂಕ 23.08.2017 ರಂದು ನ್ಯಾಯಾಲಯದ ಆದೇಶದಂತೆ ಟಿಎನ್ 63 ಎಲ್ 7627 ದ್ವಿಚಕ್ರ ವಾಹನವನ್ನು ಚಾಸಾ 12 ರವರ ವಶಕ್ಕೆ ನೀಡಿ ಅವರ ಹೇಳಿಕೆಯನ್ನು ಪಡೆದಿರುತ್ತೇನೆ. ದಿನಾಂಕ 24.08.2017 ರಂದು ನ್ಯಾಯಾಲಯದ ಆದೇಶದಂತೆ ಕೆಎ 53 ಇ 7892 ದ್ವಿಚಕ್ರ ವಾಹನವನ್ನು ಚಾಸಾ 8 ರವರ ವಶಕ್ಕೆ ನೀಡಿ ಅವರ ಹೇಳಿಕೆಯನ್ನು ಪಡೆದಿರುತ್ತೇನೆ. ದಿನಾಂಕ 01.09.2017 ರಂದು ನ್ಯಾಯಾಲಯದ ಆದೇಶದಂತೆ ಕೆಎ 53 ಇಡಿ 0699 ಮತ್ತು ಕೆಎ 03 ಇವೈ 4352 ದ್ವಿಚಕ್ರ ವಾಹನಗಳನ್ನು ಚಾಸಾ 17 ಮತ್ತು 10 ರವರ ವಶಕ್ಕೆ ನೀಡಿ ಅವರ ಹೇಳಿಕೆಗಳನ್ನು ಪಡೆದಿರುತ್ತೇನೆ.

ದಿನಾಂಕ 03.09.2017 ರಂದು ನ್ಯಾಯಾಲಯದ ಆದೇಶದಂತೆ ಕೆಎ 04 ಹೆಚ್ಆರ್ 2805 ದ್ವಿಚಕ್ರ ವಾಹನವನ್ನು ಚಾಸಾ 13 ರವರ ವಶಕ್ಕೆ ನೀಡಿ ಅವರ ಹೇಳಿಕೆಯನ್ನು ಪಡೆದಿರುತ್ತೇನೆ.

ದಿನಾಂಕ 08.09.2017 ರಂದು ನ್ಯಾಯಾಲಯದ ಆದೇಶದಂತೆ ಕೆಎ 01 ಇಎಸ್ 3135 ದ್ವಿಚಕ್ರ ವಾಹನವನ್ನು ಚಾಸಾ 18 ರವರ ವಶಕ್ಕೆ ನೀಡಿ ಅವರ ಹೇಳಿಕೆಯನ್ನು ಪಡೆದಿರುತ್ತೇನೆ.

ದಿನಾಂಕ 15.10.2017 ರಂದು ನ್ಯಾಯಾಲಯದ ಆದೇಶದಂತೆ ಟಿಎನ್ 83 ವೈ 1305 ದ್ವಿಚಕ್ರ ವಾಹನವನ್ನು ಚಾಸಾ 11 ರವರ ವಶಕ್ಕೆ ನೀಡಿ ಅವರ ಹೇಳಿಕೆಯನ್ನು ಪಡೆದಿರುತ್ತೇನೆ. ಕೆಲವು ವಾಹನಗಳನ್ನು ಕೃತ್ಯ ನಡೆದ ಸ್ಥಳದ ಆದಾರದ ಮೇಲೆ ಸಂಬಂಧಪಟ್ಟ ಪೋಲೀಸ್ ಠಾಣೆಯಾದ ಕೆಆರ್.ಪುರಂ, ಸಂಪಿಗೆ ಹಳ್ಳಿ, ಆವಲಹಳ್ಳಿ, ಯಲಹಂಕ ಪೋಲೀಸ್ ಠಾಣೆಗಳಿಗೆ ವರ್ಗಾಯಿಸಿರುತ್ತೇನೆ. ಸದರಿ ವಾಹನಗಳನ್ನು ಸಂಬಂದಪಟ್ಟ ಠಾಣೆಗಳಿಗೆ ವರ್ಗಾಯಿಸಿದ ಬಗ್ಗೆ ನಿವೇದನೆಗಳ ಮೂಲ ಪ್ರತಿಗಳನ್ನು ಸಂಬಂಧಪಟ್ಟ ಠಾಣೆಗೆ ನೀಡಿರುವುದರಿಂದ ಅವುಗಳ ಜೆರಾಕ್ಸ್ ಪ್ರತಿಗಳನ್ನು ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತೇನೆ. ಸದರಿ ದಾಖಲೆಗಳು ಜೆರಾಕ್ಸ್ ಪ್ರತಿಗಳು ಆಗಿರುವುದರಿಂದ ಅವುಗಳನ್ನು ನಿಶಾನೆಯಾಗಿ ಗುರುತಿಸಿರುವುದಿಲ್ಲ.

ನಂತರ ನನಗೆ ವರ್ಗಾವಣೆ ಆದ ಕಾರಣ ಈ ಕೇಸಿನ ಕಡತವನ್ನು ಚಾಸಾ 20 ರವರ ವಶಕ್ಕೆ ನೀಡಿರುತ್ತೇನೆ. ಆ ದಿನ ವಶಕ್ಕೆ ಪಡೆದ ಆರೋಪಿ ಈ ದಿನ ನ್ಯಾಯಾಲಯದ ಮುಂದೆ ಹಾಜರಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಹಾಜರಿದ್ದು , ಆರೋಪಿ ಪರ ವಕೀಲರು ಗೈರು ಹಾಜರಿದ್ದು, ಆರೋಪಿ ಪಾಟೀ ಸವಾಲಿಗೇ ಸಮಯ ಕೋರಿದ್ದು ಯಾವುದೇ ಸಕಾರಣಗಳು ಇಲ್ಲದ ಕಾರಣ ಆರೋಪಿಯ ಮನವಿಯನ್ನು ತಿರಸ್ಕರಿಸಿ, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ, ಚಿಂತಾಮಣಿ.